ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬಾಗೇಪಲ್ಲಿ

**ಸಿ.ಸಿ.ಸಂಖ್ಯೆ ಃ-59/2015**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಲಕ್ಷ್ಮಿನಾರಾಯಣ | |
| ತಂದೆಯ/ಗಂಡನ ಹೆಸರು | ಃ ವೆಂಕಟನಾರಾಯಣಪ್ಪ | ಪ್ರಮಾಣೀಕರಿಸಲಾದ ದಿ :24-11-2015 |
| ವಯಸ್ಸು | ಃ 45 | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ಹಂಪಸಂದ್ರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ-**

ನನಗೆ ಚಾ ಸಾ 1 ಮತ್ತು 2 ಗೊತ್ತು. ಚಾ ಸಾ 2 ರವರಿಗೆ ಅಪಘಾತದಿಂದ ತೀವ್ರ ಸ್ವರೂಪದ ಗಾಯ ಆಗಿ ಕೋಮದಲ್ಲಿದ್ದ ಕಾರಣ ಈಗ ಓಡಾಡಲು ಆಗದ ಕಾರಣ ಬೆಂಗಳೂರಿನ ಅವರ ಮಾವನ ಮನೆಯಲ್ಲಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುತ್ತೇನೆ.

ಸುಮಾರು ಒಂದೂವರೆ ವರ್ಷದ ಹಿಂದೆ ರಾತ್ರಿ 7-30 ರಿಂದ 7-45 ಗಂಟೆ ಸಮಯದಲ್ಲಿ ನಾನು ನನ್ನ ಬುಲೇರೋ ವಾಹನದಲ್ಲಿ ಚಿಕ್ಕಬಳ್ಳಾಪುರಕ್ಕೆ ಎನ್ ಹೆಚ್ 7 ರಲ್ಲಿ ಹೋಗುತ್ತಿರುವಾಗ ಚಿತ್ರಾವತಿ ಡ್ಯಾಮ್‌ಗೆ ಹೋಗುವ ರಸ್ತೆಯ ಹತ್ತಿರ ನಮ್ಮ ವಾಹನದ ಮುಂದೆ ಒಂದು ಹೀರೋ ಹೊಂಡಾ ಸಿ ಡಿ 100 ವಾಹನ ರಸ್ತೆಯ ಎಡಬದಿಯಲ್ಲಿ ಹೋಗುತ್ತಿತ್ತು, ಒಂದು ಕಾರು ನಮ್ಮ ಹಿಂದುಗಡೆಯಿಂದ ಅಂದರ ಹೈದರಬಾದ್ ಕಡೆಯಿಂದ ಜೋರಾಗಿ ಬಂದು ನಮ್ಮ ಮುಂದೆ ಹೋಗುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸ್ವಲ್ಪ ದೂರ ಹೋಗಿ ನಿಲ್ಲಿಸುವಂತೆ ಮಾಡಿ ನಂತರ ನಿಲ್ಲಿಸದೇ ಸದರಿ ಕಾರು ಹಾಗೇ ಹೋಗಿರುತ್ತದೆ. ಸದರಿ ಕಾರಿನ ಸಂಖ್ಯೆ ಕೆ ಎ 05 ಎಂ ಎಲ್ 1950.

ನಾವು ನಂತರ ನಮ್ಮ ವಾಹನವನ್ನು ನಿಲ್ಲಿಸಿ ದ್ವಿ ಚಕ್ರ ವಾಹನ ಬಿದ್ದ ಕಡೆಗೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ಕೆಳಗೆ ಬಿದಿದ್ದ. ಅವರಿಗೆ ಕೈಕಾಲುಗಳಿಗೆ ಮತ್ತು ತಲೆಗೆ ತೀವ್ರ ಸ್ವರೂಪದ ಗಾಯವಾಗಿತ್ತು. ದ್ವಿ ಚಕ್ರ ವಾಹನಕ್ಕೂ ಸಹಾ ಜಖಂ ಆಗಿತ್ತು. ಅಲ್ಲಿಯೇ ಬಿದಿದ್ದ ದಾಖಲಾತಿಗಳನ್ನು ನೋಡಿದಾಗ ಅವನು ನಮ್ಮ ಪಕ್ಕದ ಸಂಜೀವರಾಯನಪಲ್ಲಿಯ ನಾರಾಯಣಸ್ವಾಮಿರವರ ಮಗ ನಟರಾಜ ಆಗಿದ್ದ. ತಕ್ಷಣ ನಾನು ಅವರ ಮನೆಯವರೆಗೆ

ಫೋನ್ ಮಾಡಿ ವಿಚಾರ ತಿಳಿಸಿರುತ್ತೇನೆ. ತಕ್ಷಣ ಅಲ್ಲಿ ಸಾಕಷ್ಟು ಜನ ಸೇರಿ ಆಂಬುಲೆನ್ಸ್‌ಗೆ ಫೋನ್ ಮಾಡಿದ ಕಾರಣ ಅದು ಬಂದಾಗ ಆಂಬುಲೆನ್ಸ್‌ನಲ್ಲಿ ಅವರನ್ನು ಹಾಕಿ ನಾನು ಚಿಕ್ಕಬಳ್ಳಾಪುರಕ್ಕೆ ಹೋಗಿರುತ್ತೇನೆ.

ಚಾ ಸಾ 2 ರವರನ್ನು ನಾನು ಎಲ್ಲೂ ಕರೆದುಕೊಂಡು ಹೋಗಿರುವುದಿಲ್ಲ. ಆ ನಂತರ ಚಾ ಸಾ 2 ರವರ ಮನೆಯವರನ್ನು ವಿಚಾರಿಸಿದಾಗ ಚಾ ಸಾ 2 ರವರನ್ನು ಬಾಗೇಪಲ್ಲಿಯಿಂದ ಬೆಂಗಳೂರಿನ ಎಂ ಎಸ್ ರಾಮಯ್ಯ ಆಸ್ಪತ್ರೆಗೆ ದಾಖಲು ಮಾಡಿರುವ ವಿಚಾರ ನನಗೆ ತಿಳಿದಿರುತ್ತದೆ. ನಾನು ಸಹಾ 2 ಭಾರಿ ಹೋಗಿ ನೋಡಿರುತ್ತೇನೆ.

ಅಪಘಾತದ ದಿನ ನಾನು ಕಾರಿನ ಚಾಲಕನನ್ನು ನೋಡಿರುವುದಿಲ್ಲ. ಆದರೆ ಕಾರನ್ನು ಬಿಡಿಸಿಕೊಳ್ಳಲು ಬಂದಿದ್ದಾಗ ಪೋಲಿಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಸದರಿ ವ್ಯಕ್ತಿಯಾಗಿರುತ್ತಾನೆ. ಅವರ ಹೆಸರು ಸೂರ್ಯಪ್ರಕಾಶ್ ಆಗಿರುತ್ತದೆ. ಎಲ್ಲಾ ವಿಚಾರ ನಾನು ಪೋಲಿಸರ ಮುಂದೆ ಹೇಳಿರುತ್ತೇನೆ.

ಸಾಕ್ಷಿಗೆ ದಿಃ8-2-14 ರ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಗುರ್ತಿಸಿದ್ದ ಮೇರೆಗೆ ಅದನ್ನು ನಿ ಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 3 ಎ ಎಂದು ಗುರ್ತಿಸಲಾಯಿತು. ಅಪಘಾತವಾದ 2 ರಿಂದ 3 ದಿನಗಳ ನಂತರ ಪೋಲಿಸರು ಅಪಘಾತವಾದ ಸ್ಥಳ ತೋರಿಸಿ ಎಂದು ಕೇಳಿದ ಮೇರೆಗೆ ನಾನು ಅವರನ್ನು ಕರೆದುಕೊಂಡು ಹೋಗಿ ಅಪಘಾತವಾದ ಸ್ಥಳವನ್ನು ತೋರಿಸಿದಾಗ ಅವರು ಪಂಚನಾಮೆ ಮಾಡಿ ಅದಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಯಾವುದೇ ವಸ್ತು ಜಪ್ತು ಮಾಡಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ-**

ದ್ವಿ ಚಕ್ರ ವಾಹನದ ಸಂಖ್ಯೆ ಕೆ ಎ 35 ಇ 6924 ಆಗಿತ್ತು ಎಂದರೆ ಬಹಳ ದಿನಗಳಾದ ಕಾರಣ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ದಿನ ಕಾರಿನ ಚಾಲಕ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಎಂದರೆ ಸರಿ. 108 ಆಂಬುಲೆನ್ಸ್‌ನಲ್ಲಿ ಚಾ ಸಾ 2 ರವರನ್ನು ಬಾಗೇಪಲ್ಲಿ ಆಸ್ಪತ್ರೆಗೆ ನಾನೇ ದಾಖಾಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮಾನ್ಯ ಶ್ರೀ. ಕೆ ಎಸ್ ಆರ್ ಆರೋಪಿಯ ಪರ ವಕೀಲರಿಂದ ಃ-**

ಸದರಿ ದಿನ ನಮ್ಮ ಮುಂದೆ ಎಷ್ಟು ವಾಹನಗಳು ಹೋಗುತ್ತಿತ್ತು ಎಂದು ಹೇಳಲಾಗುವುದಿಲ್ಲ. ನನ್ನ ಕಾರಿನ ಸಂಖ್ಯೆಯನ್ನು ಪೋಲಿಸರು ಕೇಳಿರುತ್ತಾರೆ. ಆದರೆ ಅದನ್ನು ನಮೂದು ಮಾಡಿಕೊಂಡಿಲ್ಲ. ನಾನು ಆಂಬುಲೆನ್ಸ್ ವಾಹನಕ್ಕೆ ಫೋನ್ ಮಾಡಲು ಪ್ರಯತ್ನ ಪಟ್ಟಿರುವುದಿಲ್ಲ. ಯಾರು ಆಂಬುಲೆನ್ಸ್‌ಗೆ ಫೋನ್ ಮಾಡಿದ್ದಾರೆಂದು ಗೊತ್ತಿಲ್ಲ.

ಚಾ ಸಾ 2 ರವರಿಗೂ ಮತ್ತು ನನಗೂ ಯಾವುದೇ ಸಂಬಂಧ ಇರುವುದಿಲ್ಲ. ಸಂಜೀವರಾಯನಹಳ್ಳಿಗೂ ಹಂಪಸಂದ್ರಗೂ 3 ಕಿ ಮೀ ಅಂತರ ಇದೆ. ನಾನು ಮತ್ತು ಚಾ ಸಾ 2 ಒಂದೇ ಜಾತಿಯವರು ಎಂದರೆ ಸರಿ. ಅಪಘಾತವಾದ ಪೋಲಿಸರಿಗೆ ಅಥವಾ ಆಸ್ಪತ್ರೆಗೆ ಫೋನ್ ಮಾಡುವ ವಿಚಾರ ನನಗೆ ಗೊತ್ತು. ನಾನು ಫೋನ್ ಮಾಡಬೇಕು ಎನ್ನುವಷ್ಟರಲ್ಲಿ ಯಾರೋ ಫೋನ್ ಮಾಡಿರುವುದಾಗಿ ಹೇಳಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯೇ ಆಂಬುಲೆನ್ಸ್‌ಗೆ ಫೋನ್ ಮಾಡಿದ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ.

ದಿಃ5-2-14 ರಂದು ರಾತ್ರಿ 8 ಗಂಟೆ 9 ನಿಮಿಷಕ್ಕೆ ಮತ್ತು 8 ಗಂಟೆ 9 ನಿಮಿಷ 40 ಸೆಕೆಂಡ್‌ಗೆ ಫೋನ್ ಮಾಡಿ ಯಾರಿಗೋ ಅಪಘಾತವಾಗಿದೆ ಬರಲು ಆಂಬುಲೆನ್ಸ್‌ಗೆ ಫೋನ್ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಅಪಘಾತ ಮಾಡಿಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹಾ ಮತ್ತು ಸದರಿರವರ ಕಾರಿಗೆ ವಿಮೆ ಮಾಡಿಸುವ ಕಾರಣ ಪರಿಹಾರ ಸಿಗುತ್ತದೆ ಎಂಬ ಕಾರಣದಿಂದ ಅವರ ಹೆಸರು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ ಸಾ 2 ರವರು ನಮ್ಮ ಜಾತಿಯವರು ಮತ್ತು ಪಕ್ಕದವ ಊರಿನವರಾದ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ.

ನಾರಾಯಣಸ್ವಾಮಿ ಇವರನ್ನು ನೋಡಿರುತ್ತೇನೆ ಮತ್ತು ಪರಿಚಯ ಇರುತ್ತದೆ. ಅವರು ಮತ್ತು ಚಾ ಸಾ 1 ಅಣ್ಣ ತಮ್ಮಂದಿರಾಗಿರುತ್ತಾರೆ. ಅಪಘಾತವಾದ 2 ರಿಂದ 3 ದಿನಗಳ ನಂತರ ಪೋಲಿಸ್ ಠಾಣೆಗೆ ಬಂದಿದ್ದು ಬಿಟ್ಟರೇ ಈ ಕೇಸಿನ ವಿಚಾರವಾಗಿ ನಾನು ಠಾಣೆಗೆ ಹೋಗಿಲ್ಲ. ನಿರ್ದಿಷ್ಟವಾಗಿ ಯಾವ ದಿನಾಂಕ ಠಾಣೆಗೆ ಹೋಗಿದ್ದೇ ಎಂದು ಹೇಳಲಾಗುವುದಿಲ್ಲ. ಆರೋಪಿಯನ್ನು ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ, ಆದರೆ ಯಾವ ದಿನ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.

ಚಾ ಸಾ 2 ರವರ ಹೆಂಡ್ತಿ ಬೆಂಗಳೂರಿನ ನ್ಯಾಯಾಲದಲ್ಲಿ ಎಂ ವಿ ಸಿ 3655/14 ರ ಪ್ರಕಾರ ಕೇಸು ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪರಿಹಾರ ಜಾಸ್ತಿ ಸಿಗಲಿ ಎಂಬ

ಕಾರಣದಿಂದ ಆರೋಪಿ ಅಪಪಾತ ಮಾಡದಿದ್ದೂ ಸಹಾ ಮಾಡಿದ್ದಾರೆ ಎಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

ಯಾವುದಾದರೂ ಅಪರಾಧ ಆದಲ್ಲಿ ತಕ್ಷಣ ದೂರು ನೀಡಬೇಕೆಂಬ ವಿಚಾರ ತಿಳಿದ್ದಿತ್ತು. ನನಗೆ ಬೇರೆ ಕೆಲಸ ಇದ್ದ ಕಾರಣ ದೂರು ನೀಡಲಿಲ್ಲ. ಆರೋಪಿ ಕಾರಿನಲ್ಲಿ ಒಟ್ಟು ಎಷ್ಟು ಜನ ಇದ್ದರೆಂದು ಕತ್ತಲೆಯಾಗಿದ್ದ ಕಾರಣ ನಾನು ನೋಡಿರುವುದಿಲ್ಲ.

ಆರೋಪಿ ಅಪಘಾತ ಮಾಡದಿದ್ದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

**ಮರುವಿಚಾರಣೆ ಃ-** ಇಲ್ಲ

(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು)

**ಓ.ಹೇ.ಕೇ.ಸರಿ ಇದೆ**

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಬಾಗೇಪಲ್ಲಿ.**

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬಾಗೇಪಲ್ಲಿ

**ಸಿ.ಸಿ.ಸಂಖ್ಯೆ ಃ-59/2015**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಬುಚ್ಚಿರೆಡ್ಡಿ | |
| ತಂದೆಯ/ಗಂಡನ ಹೆಸರು | ಃ ನರಸಿಂಹರೆಡ್ಡಿ | ಪ್ರಮಾಣೀಕರಿಸಲಾದ ದಿ :24-11-2015 |
| ವಯಸ್ಸು | ಃ 50 | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ಯರ್ರಹಳ್ಳಿ, ಗುಡಿಬಂಡೆ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ-**

ಸಾಕ್ಷಿಗೆ ನಿ ಪಿ 3 ನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಗುರ್ತಿಸಿದ್ದ ಮೇರೆಗೆ ಸದರಿ ಸಹಿಯನ್ನು ನಿ ಪಿ 3 ಬಿ ಎಂದು ಗುರ್ತಿಸಲಾಯಿತು. 1 ವರ್ಷದ ಹಿಂದೆ ಎನ್ ಹೆಚ್ 7 ರ ಚಿತ್ರಾವತಿ ಡ್ಯಾಮ ಹತ್ತಿರ ಇರುವ ರಸ್ತೆಯಲ್ಲಿ ನಿ ಪಿ 3 ಕ್ಕೆ ಸಹಿ ಮಾಡಿದ್ದೇನೆ. ಪೋಲಿಸರು

ಸದರಿ ಸ್ಥಳದಲ್ಲಿ ಅಪಘಾತವಾಗಿದೆ ಎಂಬ ಕಾರಣಕ್ಕೆ ಪಂಚನಾಮೆ ಮಾಡುತ್ತಿದ್ದಾಗ ನಮ್ಮನ್ನು ಕರೆದು ಸಹಿ ಮಾಡಿಸಿಕೊಂಡಿರುತ್ತಾರೆ. ಆಗ ಬೆ 10 ಗಂಟೆಯಾಗಿತ್ತು.

**ಪಾಟೀ ಸವಾಲು ಮಾನ್ಯ ಶ್ರೀ. ಕೆ ಎಸ್ ಆರ್ ಆರೋಪಿಯ ಪರ ವಕೀಲರಿಂದ ಃ-**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಃ-** ಇಲ್ಲ

(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು)

**ಓ.ಹೇ.ಕೇ.ಸರಿ ಇದೆ**

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ,ಬಾಗೇಪಲ್ಲಿ.**